(ಶ್ರೀ ಎಚ್. ಸಿದ್ದವೀರಪ್ಪ)

ಡಿಸೆಂಬರ್‌ವರೆಗೆ ನಿಮ್ಮ ಸರದಿಯನ್ನು ಎಕ್ಟೆಂಡ್ ಮಾಡಿದ್ದೇವೆ, ಕೆಲಸಕ್ಕೆ ಹೋಗಿ, ಪಿ.ಎಸ್.ಸಿ. ಯವರು ನಿಮ್ಮನ್ನು ಕರೆಯುತ್ತಾರೆ, take your chance along with others ಅವರು ಅಂದರೆ ಸುಮ್ಮನೆ ಓಡಾಡುತ್ತಿದ್ದಾರೆ. ಓಡಾಡಬೇಡಿ ಎಂದು ಹೇಳಿದರೆ ಕೇಳುವುದಿಲ್ಲ. ಈ ಸ್ಪೆಷಲಿಸ್ಟ್ ಡಾಕ್ಟರ್‌ಗಳು ನಿಮ್ಮ ಹತ್ತಿರ ಬಂದಾಗ ಸುಮ್ಮನೆ ಕೆಲಸಕ್ಕೆ ಹೋಗಿ ಸೇರಿಕೊಳ್ಳಿ. ಅದನ್ನೂ ಕಳೆದುಕೊಳ್ಳಬೇಡಿ ಅಂತ ಅವರಿಗೆ ಸರಿಯಾಗಿ ಬುದ್ಧಿ ಹೇಳಿ.

ಶ್ರೀ ಹೆಚ್. ಡಿ. ದೇವೇಗೌಡ.—ಸ್ಪೆಷಲಿಸ್ಟ್ ಡಾಕ್ಟರ್‌ಗಳ ಬಗ್ಗೆ ನಾನು ಒಂದು ಕಾಂಪ್ರಿಹೆನ್ಸಿವ್ ಅಟೆನ್ಷನ್ ನೋಟೀಸ್ ಕೂಡ ಕಳುಹಿಸಿಕೊಟ್ಟಿದ್ದೇನೆ. ಕ್ಯಾಬಿನೆಟ್ ನಿರ್ಣಯ ಏನು ಆಗಿದೆ ಆ ವಿವರಣೆಗಳನ್ನೆಲ್ಲಾ ಇಟ್ಟು ಕಳುಹಿಸಿಕೊಟ್ಟಿದ್ದೇನೆ. ಸರ್ಕಾರದ ವತಿಯಿಂದ ಬಹುಶಃ if you make a statement it will be helpful to us to express our views. There are so many other points.

SRI H. SIDDAVEERAPPA.—If you want a clarification the be made after your calling Attention Notice is taken up, I will do it.

Reported Chief Minister's Speech at Bijapur

ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಅಧ್ಯಕ್ಷರೆ, ನಾನು ಮತ್ತು ಮಾನ್ಯ ಚೆಟ್ಟಿಸ್ವಾಮಿಯವರೂ ಒಂದು ನೋಟೀಸನ್ನು ಕಳುಹಿಸಿಕೊಟ್ಟಿದ್ದೇವೆ. ಮಾನ್ಯ ಮಂತ್ರಿಗಳು ಒನೇ ತಾರೀಖು ಅಥವಾ ಒನೇ ತಾರೀಖು ಬಿಜಾಪುರದಲ್ಲಿ ಲಂಚ ರುಷುವತ್ತು, ಜಾತೀಯತೆ, ಭ್ರಷ್ಟಾಚಾರ, ಸ್ವಜನ ಪಕ್ಷಪಾತ ಇವುಗಳ ಬಗ್ಗೆ ಒಂದು ಹೇಳಿಕೆ ಕೊಟ್ಟಿದ್ದಾರೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ನಿನ್ನೆ ದಿವಸ ಕಳುಹಿಸಿಕೊಟ್ಟಿದ್ದಾರೆ, ಚೀಫ್ ಮಿನಿಸ್ಟರ್ ಇಲ್ಲಿ ಇಲ್ಲ. ಇವತ್ತು ಒಂದು ಮುಖ್ಯ ವಿಷಯ ಚರ್ಚೆಗೆ ಹಾಕಕೊಂಡಿದ್ದೇವೆ: ಅವರ ಪ್ರಶ್ನೆಯನ್ನು ಯಾವತ್ತು ಬೇಕಾದರೂ ತೆಗೆದುಕೊಳ್ಳಬಹುದು. ನಿನ್ನೆ ಅದು ಬಂದಾಗಲೇ ಜ್ಞಾಪಕ ಇಟ್ಟುಕೊಂಡು ಅದನ್ನು ಪೌರ್ಣಮೆಂಟ್‌ಗೆ ಕಳುಹಿಸಿಕೊಟ್ಟಿದ್ದೇವೆ. ಈಗ ಸ್ಟೇಟ್ ಇಂಟರೆಸ್ಟ್ ಇರುವ ಒಂದು ವಿಷಯ ಇದೆ. ಅದನ್ನು ತೆಗೆದುಕೊಳ್ಳೋಣ.

ಶ್ರೀ ಎಸ್. ಬಂಗಾರಪ್ಪ.—ಚೀಫ್ ಮಿನಿಸ್ಟರ್ ನಾಳೆ ಹೇಳಿಕೆ ಕೊಡುವುದಾದರೆ ಒಳ್ಳೆಯದು. It is also a very urgent matter.

ಶ್ರೀ ಮಾನ್ಯ ದೇವೇಗೌಡರೂ ಕೂಡ ಅದರ ಬಗ್ಗೆ ಒಂದು ಹೇಳಿಕೆ ಕೊಟ್ಟಿದ್ದಾರೆ.

ಅಧ್ಯಕ್ಷರು.—ನಾವು ಒಂದು ವಾರದಿಂದ ಮೀಟಿಂಗ್ ಮಾಡುತ್ತಿದ್ದೇವೆ. ಮಾನ್ಯ ಸದಸ್ಯರು ನಿನ್ನೆ ದಿವಸ ತಾನೇ ನೋಟೀಸ್ ಕೊಟ್ಟಿದ್ದಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ನಾಲ್ಕಾರು ದಿವಸದ ಹಿಂದೆ ಬೆಂಗಳೂರು ನಗರದಲ್ಲಿ ಮತ್ತು ಎಲ್ಲೆಲ್ಲಿ ಇಂದಿರಾ ಬ್ರಿಗೇಡ್ ಏನೇನು ಗೂಂಡಾಗಿರಿ ಮಾಡುತ್ತಿದೆ. ಎಂಬ ಬಗ್ಗೆ ಬಹಳ ದೊಡ್ಡದಾಗಿ ಪ್ರಜಾವಾಣಿ ಪತ್ರಿಕೆಯಲ್ಲಿ ಬಂದಿತ್ತು. ಅದು ಬಹಳ ಮುಖ್ಯ ವಿಷಯ. ಆ ಬಗ್ಗೆ ನಮಗೆ ಅವರಿಂದ ಉತ್ತರವನ್ನು ದೊರಕಿಸಿಕೊಡಬೇಕು.